**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ,ಬಳ್ಳಾರಿ.**

**VIJAYANAGARA SRI KRISHNADEVARAYA UNIVERSITY, BALLARI.**

**ಸ್ನಾತಕೋತ್ತರ ವಿದ್ಯಾರ್ಥಿನಿಲಯದ ಪ್ರವೇಶಕ್ಕಾಗಿ ಅರ್ಜಿ (ಪ.ಜಾ & ಪ.ಪಂ ವಿದ್ಯಾರ್ಥಿಗಳು)**

# Application for Admission to P.G Hostel

**FOR THE ACADEMIC YEAR 2020-21**

| | | | |
|---|---|---|---|
| **1.** | | ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ)<br>Name of the Candidate (In Block Letters) | |
| **2.** | | ಈಗ ಪ್ರವೇಶ ಪಡೆದಿರುವ/ಕೋರಿರುವ ವಿಭಾಗ ಮತ್ತು ತರಗತಿ<br>Department and Semester to which candidate is admitted | |
| **3.** | | ವಿಭಾಗದ ಪ್ರವೇಶ ಸಂಖ್ಯೆ.<br>Department admission No. | |
| **4.** | | ಅಭ್ಯರ್ಥಿಯ ಖಾಯಂ ವಿಳಾಸ<br>Permanent address of the Candidate | |
| **5.** | | ಊರು, ಹುಟ್ಟಿದ ದಿನಾಂಕ ಮತ್ತು ವಾಸಸ್ಥಳದಿಂದ ವಿಶ್ವವಿದ್ಯಾಲಯಕ್ಕೆ ನಡುವಿನ ದೂರ<br>Place of Stay Date of Birth and distance from the residential place to university | |
| **6.** | | ತಂದೆ ಅಥವಾ ಪೋಷಕರ ಉದ್ಯೋಗ, ವರಮಾನ (ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಿ)(ತಂದೆ ಜೀವಂತವಾಗಿಲ್ಲದಿದ್ದಲ್ಲಿ ಮರಣ ಪ್ರಮಾಣ ಪತ್ರ ಲಗತ್ತಿಸಿ)<br>Occupation and Income of the Father/Guardian(If Parent has deceased enclose Death Certificate)(Income certificate to be enclosed) | |
| **7.** | **a** | ಅಭ್ಯರ್ಥಿಯ ಜಾತಿಯ ಹೆಸರು (ಪ್ರಮಾಣೀಕೃತ ಅಧಿಕಾರಿಯಿಂದ ಪಡೆದ ಧೃಢೀಕರಣ ಪತ್ರವನ್ನು ಲಗತ್ತಿಸುವುದು)<br>Name of the Caste (Enclose the recent Caste certificate issued by the competent authority) | |
| **8.** | | ಸ್ಥಳೀಯ ಪೋಷಕರ ಹೆಸರು,ವಿಳಾಸ ಮತ್ತು ವಿದ್ಯಾರ್ಥಿಯ ಸಂಬಂಧ(ಟೆಲಿಫೋನ್ ಇದ್ದರೆ ಅದರ ಸಂಖ್ಯೆ) (Name and address of the local guardian and contact number) | |
| **9.** | | ವಿದ್ಯಾರ್ಥಿಯ ಆಧಾರ್ ಸಂಖ್ಯೆ<br>(Adhaar number) | |

| | | | |
|---|---|---|---|
| **10.** | | ಮೊಬೈಲ್ ಸಂಖ್ಯೆ (Mobile Number) | |
| **11.** | | ಈ–ಮೇಲ್ ವಿಳಾಸ: (E-Mail Address) | |
| **12.** | | ವಿದ್ಯಾರ್ಥಿಯ ಬ್ಯಾಂಕ್ ಖಾತೆಯ ವಿಳಾಸ (ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಜೆರಾಕ್ಸ ಪ್ರತಿಯನ್ನು ದೃಡೀಕರಿಸಿ ಲಗತ್ತಿಸಿರಿ) (Enclose the photo copy of Bank pass Book) | |
| **13.** | | ಹಿಂದಿನ ವರ್ಷ ಓದುತ್ತಿದ್ದ ತರಗತಿ,ಕಾಲೇಜು ಮತ್ತು ಫಲಿತಾಂಶ(ಅಂಕಪಟ್ಟಿ ಲಗತ್ತಿಸಬೇಕು) Class and College last attended (enclose mark card) | |
| **14.** | **a** | ನೀವು ಈಗಾಗಲೇ ಈ ವಿಶ್ವವಿದ್ಯಾನಿಲಯದಲ್ಲಿ ಒಂದು ಪದವಿ/ಸ್ನಾತಕೋತ್ತರ ಪದವಿಯನ್ನು ಮಾಡಿದ್ದಿರಾ?ವಿವರಗಳನ್ನು ಕೊಡಿ. Have you already completed UG/PG Course in this University? Give details | |
| | **b** | ನೀವು ಹಿಂದಿನ ಮೂರು ವರ್ಷಗಳಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಯಾವುದಾದರು ಕೋರ್ಸನ್ನು ಮುಗಿಸದೇ ಮಧ್ಯದಲ್ಲಿ ಬಿಟ್ಟಿದ್ದಿರಾ?ವಿವರಗಳನ್ನು ಕೊಡಿ. Have you discontinued any course during the past three years in this University? Give details | |
| | **c** | ನಿಮ್ಮ ವ್ಯಾಸಂಗಕ್ಕೆ ನೀವು ಈ ಹಿಂದೆ ಯಾವುದಾದರೂ ವಿದ್ಯಾರ್ಥಿವೇತನ ಪಡೆದಿದ್ದಿರಾ? ವಿವರಗಳನ್ನು ಕೊಡಿ. (Give the details of the previous scholarship if availed ) | |
| **15.** | | ಅರ್ಜಿಯ ಜೊತೆ ಈ ಕೆಳಗಿನ ದಾಖಲೆಗಳನ್ನು ಲಗತಿಸತಕ್ಕದ್ದು (ಅನ್ವಯಿಸುವುದು ಮಾತ್ರ) Enclosures to be attached with the application (Applicable Only) | |
| | **a** | ಜಾತಿ ಪ್ರಮಾಣ ಪತ್ರ Caste Certificate | |
| | b | ಆದಾಯ ಪ್ರಮಾಣ ಪತ್ರ Income Certificate | |
| | **c** | ಪಾಸ್‌ಪೋರ್ಟ್ ಅಳತೆಯ ನಾಲ್ಕು ಭಾವಚಿತ್ರಗಳು | |
| | **d** | ಪದವಿಯ ಅಂಕಪಟ್ಟಿಗಳು | |
| | **e** | ಕಲ್ಯಾಣ ಕರ್ನಾಟಕ ಅಭ್ಯರ್ಥಿಯ ಪ್ರಮಾಣ ಪತ್ರ ಲಗತ್ತಿಸಿ (HK or NHK) | |
| | **f** | ಅಚಿತರ (ಕಿ.ಮೀ) ಪ್ರಮಾಣ ಪತ್ರ | |

**ದೃಢೀಕರಣ**

ಮೇಲ್ಕಂಡ ವಿವರಗಳಂತೆ ಅರ್ಜಿದಾರನಾದ ನಾನು 2020–21 ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕರ/ಬಾಲಕಿಯರ ವಸತಿ ನಿಲಯಕ್ಕೆ ಪ್ರವೇಶ ಬಯಸಿದ್ದು ವಸತಿ ನಿಲಯದ ನಿಯಮಾವಳಿಗೆ ಬಧ್ದನಾಗಿರುತ್ತೇನೆ. ಒಂದು ವೇಳೆ ವಿದ್ಯಾರ್ಥಿನಿಲಯದಲ್ಲಿ ನಾನು ನಿಯಮಬಾಹಿರವಾಗಿ ವರ್ತಿಸಿದಲ್ಲಿ ವಿದ್ಯಾರ್ಥಿನಿಲಯದ ನಿಯಮಪಾಲಕರು/ವಸತಿ ನಿಲಯದ ನಿರ್ವಹಣಾ ಅಧಿಕಾರಿಗಳು ತೆಗೆದುಕೊಳ್ಳುವ ಯಾವುದೇ ಶಿಸ್ತು ಕ್ರಮಕ್ಕೂ ಬದ್ದನಾಗಿರುತ್ತೇನೆ.

ಸ್ಥಳ: ಅಭ್ಯರ್ಥಿಯ ಸಹಿ

ತಾರೀಖು:

**ವಿಭಾಗದ ಅಧ್ಯಕ್ಷರ ದೃಢೀಕರಣ**

**Certificate by the Chairman of the Department**

ಶ್ರೀ...................................................................ಈ ವಿಭಾಗದ .......................ತರಗತಿಗೆ ಪ್ರವೇಶ ಪಡೆದ್ದಿದ್ದಾರೆ.ಇವರ ಪ್ರವೇಶಾತಿ ಸಂಖ್ಯೆ ........................................................ ದಿನಾಂಕ..................................ದೃಢೀಕರಿಸಲಾಗಿದೆ ಹಾಗೂ ಅವನ ನಡವಳಿಕೆ ಉತ್ತಮವಾಗಿದೆ.

ವಿಭಾಗ ಅಧ್ಯಕ್ಷರ ಸಹಿ

**ನಿಲಯ ಕಛೇರಿಯ ಉಪಯೋಗಕ್ಕಾಗಿ**

ಶ್ರೀ....................................................................................................................................................ತರಗತಿ ...........................................................................................ವಿಭಾಗ....................................................... ಇವರಿಗೆ ನಿಲಯಕ್ಕೆ ಪ್ರವೇಶ ನೀಡಲಾಗಿದೆ.

ಪ್ರವೇಶಾತಿಯ ದಿನಾಂಕ :
ಹಣ ಸಂದಾಯ ಮಾಡಿದ ರಸೀದಿ ಸಂಖ್ಯೆ:
ಮೊತ್ತ:

.........................................................
ವಾರ್ಡನ್/ಶಿಕ್ಷಕ ಸಲಹೆಗಾರ ಸಹಿ

**ನಮೂನೆ–1**

**ವಿದ್ಯಾರ್ಥಿಗಳ ಮುಚ್ಚಳಿಕೆ ಪತ್ರ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ...................................................... ತರಗತಿಯಲ್ಲಿ ................................ ವ್ಯಾಸಂಗಮಾಡುತ್ತಿರುವ ಶ್ರೀ................................................................... ಆದ ನಾನು ವಿದ್ಯಾರ್ಥಿನಿಲಯದ ಪ್ರವೇಶವನ್ನು ಬಯಸಿದ್ದೇನೆ. ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯದ ಸೂಚಿತ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತೇನೆ ಹಾಗೂ ವಿಶ್ವವಿದ್ಯಾಲಯದ ನಿಯಮಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅಥವಾ ವಿದ್ಯಾರ್ಥಿನಿಲಯದ ಅಧಿಕಾರಿ/ನೌಕರರೊಡನೆ ಅನುಚಿತವಾಗಿ ವರ್ತಿಸಿದಲ್ಲಿ ಮತ್ತು ಶಿಕ್ಷಕ ಸಲಹೆಗಾರರಿಗೆ ಅವಿಧೇಯತೆಯಿಂದ ನಡೆದುಕೊಂಡಲ್ಲಿ ನನ್ನನ್ನು ನಿರ್ದಾಕ್ಷಿಣ್ಯವಾಗಿ ವಿದ್ಯಾರ್ಥಿನಿಲಯದಿಂದ ಹೊರಹಾಕಬಹುದೆಂದು ಒಪ್ಪಿರುತ್ತೇನೆ. ಇದಲ್ಲದೆ ನನ್ನ ಪರೀಕ್ಷೆಗಳು ಮುಗಿದ ಎರಡು ಮೂರು ದಿನಗಳಲ್ಲಿ ನನಗೆ ಕೊಟ್ಟಿರುವ ವಿದ್ಯಾರ್ಥಿನಿಲಯದ ಕೊಠಡಿಯನ್ನು ಅಧಿಕಾರಿಗಳ ವಶಕ್ಕೆ ಒಪ್ಪಿಸಿ ವಿದ್ಯಾರ್ಥಿನಿಲಯದಿಂದ ತೆರಳುತ್ತೇನೆ. ಒಂದುವೇಳೆ ನಾನು ತೆರವುಗೊಳಿಸದಿದ್ದಲ್ಲಿ ನನ್ನ ಮೇಲೆ ವಿಶ್ವವಿದ್ಯಾಲಯ ತಕ್ಷಣವೇ ಶಿಸ್ತಿನ ಕ್ರಮವನ್ನು ಕೈಗೊಳ್ಳುವುದಕ್ಕೆ ಬದ್ಧನಾಗಿರುತ್ತೇನೆ. ಈ ಮೇಲ್ಕಂಡ ಎಲ್ಲಾ ಷರತ್ತುಗಳಿಗೆ ಒಪ್ಪಿ ಈ ಮುಚ್ಚಳಿಕೆ ಪತ್ರದ ನಿಯಮಗಳನ್ನು ಓದಿ ನಾನು ಸಹಿ ಮಾಡಿರುತ್ತೇನೆ.

(ವಿದ್ಯಾರ್ಥಿಯ ಸಹಿ)

ಶ್ರೀ ..............................................................................................................................ಆದ ನನ್ನ ಮಗ ಸ್ನಾತಕೋತ್ತರ ವಿಭಾಗದ ...........................................................................................ದಲ್ಲಿ ವ್ಯಾಸಂಗ ಮಾಡುತ್ತಿದ್ದು ವಿಶ್ವವಿದ್ಯಾನಿಲಯದ ನಿಯಮಾನುಸಾರ ನಡೆಯಲು ಮತ್ತು ನಿಲಯಕ್ಕೆ ಸಲ್ಲಬೇಕಾದ ಶುಲ್ಕದ ಬಗಗೆ ನಾನು ಸಂಪೂರ್ಣ ಜವಾಬ್ದಾರನಾಗಿರುತ್ತೇನೆ.ಈ ಮೇಲ್ಕಂಡ ಷರತ್ತುಗಳಿಗೆ ನಾವು ಬದ್ಧರಾಗಿರುತ್ತೇವೆ.

(ತಂದೆ/ತಾಯಿ/ಪೋಷಕರ ಸಹಿ)

## <u>ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ನಿಬಂಧನೆ/ಷರತ್ತುಗಳು</u>

| | |
|---|---|
| **1.** | ವಿದ್ಯಾರ್ಥಿನಿಲಯದ ಪ್ರವೇಶಾತಿಯೂ ವಿಶ್ವವಿದ್ಯಾನಿಲಯದಿಂದ ಅಧಿನಿಯಮಗಳಿಗೆ ಒಳಪಟ್ಟಿರುತ್ತದೆ. |
| **2.** | ವಿದ್ಯಾರ್ಥಿನಿಲಯಗಳಲ್ಲಿ ವಿಶ್ವವಿದ್ಯಾನಿಲಯವು ಅರ್ಹತೆಯ ಮೇರೆಗೆ ನೀಡುವ ವಿಶೇಷ ಸವಲತ್ತು,ಲಭ್ಯವಿರುವ ಸೇವಾ ಸೌಲಭ್ಯಗಳು ಇವುಗಳನ್ನು ಮಾತ್ರವಷ್ಟೇ ಒದಗಿಸಲಾಗುವುದು. ಆದರೆ ಅವುಗಳನ್ನು ವಿದ್ಯಾರ್ಥಿಗಳು ಹಕ್ಕುಬಾಧ್ಯತೆಗಳೆಂದು ಭಾವಿಸುವಂತಿಲ್ಲ. |
| **3.** | ಊಟದ ವ್ಯವಸ್ಥೆಯಿರುವ ವಿದ್ಯಾರ್ಥಿನಿಲಯಗಳಲ್ಲಿ ಕೇವಲ ಪ್ರವೇಶಾತಿಯನ್ನು ಪಡೆದಿರುವ ವಿದ್ಯಾರ್ಥಿಗೆ ಮಾತ್ರ ಕೊಠಡಿ ಮತ್ತು ಊಟದ ವ್ಯವಸ್ಥೆ ಸೀಮಿತವಾಗಿರುತ್ತದೆ. |
| **4.** | ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತ ವಿದ್ಯಾರ್ಥಿಗಳು ಕೊಠಡಿಗಳಲ್ಲಿ ವಾಸಿಸುವುದಾಗಲೀ ಮತ್ತು ಭೋಜನ ವ್ಯವಸ್ಥೆಯ ಪ್ರಯೋಜನವನ್ನು ಪಡೆಯುವುದಾಗಲಿ ಮಾಡಿದರೆ ಅಂತಹ ಅನಧಿಕೃತ ವಿದ್ಯಾರ್ಥಿಗಳ ಮೇಲೆ ಕಾನೂನು ರೀತಿಯಲ್ಲಿ ಅಪರಾಧಿಯೆಂದು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು. |
| **5.** | ವಿದ್ಯಾರ್ಥಿನಿಲಯದ ಯಾವುದೇ ವಿದ್ಯಾರ್ಥಿಗಳು ಸಂದರ್ಶಕರನ್ನು ನಿಲಯದ ಕೊಠಡಿಗಳಿಗೆ ಕರೆದೊಯ್ಯಬಾರದು, ನಿಶ್ಚಿತ ಸಂದರ್ಶನ ಕೊಠಡಿಯಲ್ಲಿ ಮಾತ್ರ ಭೇಟಿಯಾಗಬೇಕು. |
| **6.** | ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ, ವಿದ್ಯಾರ್ಥಿನಿಲಯದ ಯಾವುದೇ ರೀತಿಯ ಆಸ್ತಿಪಾಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು ಮತ್ತು ವಿದ್ಯಾರ್ಥಿನಿಲಯದ ಶಿಕ್ಷಕಸಲಹೆಗಾರರು,ಸಿಬ್ಬಂದಿ ವರ್ಗದವರನ್ನು ,ಅಧಿಕಾರಿಗಳನ್ನು ಯಾವುದೇ ಕಾರಣಕ್ಕೂ ಏಕವಚನದಲ್ಲಿ ಮಾತನಾಡುವುದು,ಮಾನಸಿಕೆ ಹಿಂಸೆ ಕೊಡುವುದು ಹಾಗೂ ಮೆಸ್ ಸಿಬ್ಬಂದಿ ವರ್ಗದವರ ಜೊತೆಯಲ್ಲಿ ಅಶಿಸ್ತಿನಿಂದ ನಡೆದುಕೊಂಡರೆ ತಕ್ಷಣವೇ ಅಂತಹ ವಿದ್ಯಾರ್ಥಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು. |
| **7.** | ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ವಿದ್ಯಾರ್ಥಿಗಳ ಕೊಠಡಿಗಳಲ್ಲಿ ಸ್ವತಃ ಅಡುಗೆ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆಕಸ್ಮಿಕವಾಗಿ ಯಾವುದಾದರೂ ವಿದ್ಯಾರ್ಥಿ ಕೊಠಡಿಗಳಲ್ಲಿ ಅಡುಗೆ ಮಾಡುವುದು ಕಂಡುಬಂದರೆ ಅಂತವರ ಪ್ರವೇಶಾತಿಯನ್ನು ರದ್ದುಗೊಳಿಸುವುದು. |
| **8.** | ಯಾವುದೇ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ಜೂಜಾಟ,ಧೂಮಪಾನ, ಮಾದಕವಸ್ತು ಸೇವನೆ,ಮದ್ಯಪಾನ ಹಾಗೂ ನೀಲಿ ಚಿತ್ರಗಳ ವೀಕ್ಷಣೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇದಕ್ಕೆ ಒಳಪಡುವ ವಿದ್ಯಾರ್ಥಿ ಕಂಡುಬಂದರೆ ಆಯಾ ವಿದ್ಯಾರ್ಥಿನಿಲಯದಲ್ಲೇ ಕಾನೂನು ರೀತಿಯ ಕ್ರಮಕೈಗೊಂಡು ಅಂತಹ ವಿದ್ಯಾರ್ಥಿಗಳನ್ನು ವಿದ್ಯಾರ್ಥಿನಿಲಯದಿಂದ ಕೂಡಲೇ ಹೊರಹಾಕಲಾಗುವುದು. |
| **9.** | ಯಾವುದೇ ವಿದ್ಯಾರ್ಥಿ ವಿದ್ಯಾರ್ಥಿನಿಲಯಗಳಲ್ಲಿ ರ್‍ಯಾಗಿಂಗ್ ಅಥವಾ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿದಲ್ಲಿ ತಕ್ಷಣವೇ ಉಗ್ರ ಶಿಕ್ಷೆಗೆ ಒಳಪಡಿಸಲಾಗುವುದು. |
| **10.** | ವಿದ್ಯಾರ್ಥಿನಿಲಯದ ಶುಲ್ಕವನ್ನು ಎಲ್ಲಾ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ದಿನಾಂಕದೊಳಗೆ ಪಾವತಿಮಾಡಬೇಕು. |
| **11.** | ಪ್ರತಿಯೊಬ್ಬ ವಿದ್ಯಾರ್ಥಿ ಫಬ್ರವರಿ ತಿಂಗಳ ಕೊನೆಯಲ್ಲಿ ನಿಲಯಕ್ಕೆ ಸಲ್ಲಿಸಬೇಕಾದ ಹಣವನ್ನು ಪೂರ್ಣವಾಗಿ ಪಾವತಿ ಮಾಡದಿದ್ದಲ್ಲಿ ಪರೀಕ್ಷೆಯ ಪ್ರವೇಶ ಪತ್ರವನ್ನು ತಡೆಹಿಡಿಯಲಾಗುವುದು. |
| **12.** | ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಮತ್ತು ಇತರೆ ವೆಚ್ಚವನ್ನು ಸರ್ಕಾರದಿಂದ ತರಿಸಿಕೊಳ್ಳುವುದು ಆಯಾ ವಿದ್ಯಾರ್ಥಿಗಳದೇ ಸಂಪೂರ್ಣ ಹೊಣೆಗಾರಿಕೆಯಾಗಿರುತ್ತದೆ. ಆಕಸ್ಮಿಕವಾಗಿ ವಿದ್ಯಾರ್ಥಿ ಪ್ರವೇಶ ಪಡೆದ ವಿದ್ಯಾಭ್ಯಾಸದ ಅವಧಿಯು ಮುಗಿಯುವ ಮುಂಚಿತವಾಗಿ (ಟಿ.ಸಿ.ಹೆಚ್.,ಬಿಎಡ್. ಅಥವಾ ಯಾವುದಾದರು ಉದ್ಯೋಗಕ್ಕೆ) ವಿದ್ಯಾರ್ಥಿನಿಲಯವನ್ನು ಬಿಟ್ಟುಹೋದರೆ ಅದುವರೆವಿಗೂ ವಿದ್ಯಾರ್ಥಿನಿಲಯದಲ್ಲಿ ಪಡೆದುಕೊಂಡಿರುವ ಸವಲತ್ತುಗಳ ವೆಚ್ಚವನ್ನು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು. ಇಲ್ಲವಾದಲ್ಲಿ ಯಾವುದೇ ಕಾರಣದಿಂದ ಮೂಲ ದಾಖಲಾತಿಗಳು ಮತ್ತು ಅಂಕಪಟ್ಟಿಗಳನ್ನು ವಿದ್ಯಾರ್ಥಿಗೆ ಹಿಂತಿರುಗಿಸಲು ಸಾಧ್ಯವಿರುವುದಿಲ್ಲ. |
| **13.** | ವಿದ್ಯಾರ್ಥಿನಿಲಯದಲ್ಲಿ ವಾಸವಿರುವ ವಿದ್ಯಾರ್ಥಿಗಳ ಬಗ್ಗೆ ಆಯಾ ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರು ಕೆಲವು ಸಂದರ್ಭಗಳಲ್ಲಿ ತಂದೆ/ತಾಯಿ ಅಥವಾ ಪೋಷಕರಿಗೆ ವರದಿಯನ್ನು ಕಳುಹಿಸಿಕೊಡುತ್ತಾರೆ. |
| **14.** | ಯಾವುದೇ ವಿದ್ಯಾರ್ಥಿನಿಲಯಗಳಲ್ಲಿ ಯಾವುದಾದರೂ ಸಣ್ಣಪುಟ್ಟ ಸಮಸ್ಯೆಗಳು ಉದ್ಭವಿಸಿದರೆ ಅದಕ್ಕೆ ಸಂಬಂಧಿಸಿದ ಅಧಿಕಾರಿಯ ಕಛೇರಿಗೆ ಮೂರು ಅಥವಾ ಐದು ವಿದ್ಯಾರ್ಥಿಗಳು ಹೋಗಿ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು.ಯಾವುದೇ ಕಾರಣವಿಲ್ಲದೇ ಉದ್ದೇಶ ಪೂರ್ವಕವಾಗಿ 50–60 ವಿದ್ಯಾರ್ಥಿಗಳು ಕಛೇರಿಗೆ ನುಗ್ಗುವುದು,ಅಧಿಕಾರಿಗಳು ವಾಸವಾಗಿರುವ ಮನೆಗಳಿಗೆ ಹೋಗಿ ಪ್ರಚೋದಿಸಿ ಗಲಾಟೆ ಮಾಡುವುದು ಅವಮಾನಗೊಳಿಸುವುದು,ಕಂಡುಬಂದರೆ ತಕ್ಷಣವೇ ಕಾನೂನು ರೀತಿಯ ಕ್ರಮವನ್ನು ಜರುಗಿಸಲಾಗುವುದು. |
| **15.** | ಪ್ರತಿಯೊಬ್ಬ ವಿದ್ಯಾರ್ಥಿಯ ಹಾಜರಾತಿಯು ವಿದ್ಯಾರ್ಥಿವೇತನಕ್ಕೆ ಬಹಳ ಪ್ರಮುಖವಾದದ್ದು.ಆದ ಕಾರಣ ಎಲ್ಲಾ ವಿದ್ಯಾರ್ಥಿಗಳು ತಪ್ಪದೇ ತರಗತಿಗಳಿಗೆ ಹಾಜರಾಗಬೇಕು.ಇಲ್ಲವಾದಲ್ಲಿ ವಿದ್ಯಾರ್ಥಿನಿಲಯದ ಎಲ್ಲಾ ವೆಚ್ಚದ ಬಾಬ್ತು ಮೊಬಲಗನ್ನು ಸಂಪೂರ್ಣವಾಗಿ ವಿದ್ಯಾರ್ಥಿಯು ತನ್ನ ಸ್ವಂತ ಹಣದಿಂದಲೇ ಭರಿಸಬೇಕು. |
| **16.** | ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಕಾನೂನು ರೀತಿಯಲ್ಲಿ ಹತ್ತು (10) ತಿಂಗಳು ಮಾತ್ರ ವಿದ್ಯಾರ್ಥಿ ವೇತನವು ಮಂಜೂರಾಗುತ್ತದೆ.ನಂತರ ಸಂಭವಿಸುವ ಸಮಸ್ಯೆಗಳಿಗೆ ವಿಶ್ವವಿದ್ಯಾಲಯವು ಹೊಣೆಯಾಗಿರುವುದಿಲ್ಲ. ಆ ಸಂದರ್ಭದಲ್ಲಿ ಆಯಾ ವಿದ್ಯಾರ್ಥಿ ವಿಶ್ವವಿದ್ಯಾನಿಲಯದ ನಿಯಮಕ್ಕೆ ಬದ್ಧರಾಗಿರಬೇಕು. |
| **17.** | ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿ ಆಕಸ್ಮಿಕವಾಗಿ ಅನಾರೋಗ್ಯಕ್ಕೆ ತುತ್ತಾದರೆ ಆರೋಗ್ಯದ ಜವಾಬ್ದಾರಿಯನ್ನು ಆಯಾ ವಿದ್ಯಾರ್ಥಿಗಳು ಮತ್ತು ಪೋಷಕರು ಗಮನಹರಿಸಿ ಆರೋಗ್ಯವನ್ನು ಸರಿಪಡಿಸಿಕೊಳ್ಳಬೇಕು. ಇಂತಹ ಸಂದರ್ಭಗಳಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಆರ್ಥಿಕ ನೆರವನ್ನು ನೀಡಲಾಗುವುದಿಲ್ಲ. ಅಲ್ಲದೆ ಯಾವುದೇ ಅಧಿಕಾರಿಗಳ ಹೊಣೆಗಾರರಾಗಿರುವುದಿಲ್ಲ. |
| **18.** | ಒಮ್ಮೆ ವಿದ್ಯಾರ್ಥಿನಿಲಯಕ್ಕೆ ಪ್ರವೇಶವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳು ಮೆಸ್‌ನಲ್ಲಿ ಕಡ್ಡಾಯವಾಗಿ ಊಟವನ್ನು ತಗೆದುಕೊಳ್ಳಬೇಕು. ಹಾಗೂ ವಿಶ್ವವಿದ್ಯಾಲಯದಿಂದ ವಿಭಾಗಗಳಿಗೆ ರಜೆ ಘೋಷಿಸದೆ ಇರುವ ಸಮಯದಲ್ಲಿ ಮೆಸ್‌ನಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ರಿಯಾಯಿತಿಯನ್ನು ನೀಡಲಾಗುವುದಿಲ್ಲ. ಇದನ್ನು ನಿಲಯಕ್ಕೆ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಪಾಲಿಸುವುದು. |
| **19.** | ವಿದ್ಯಾರ್ಥಿನಿಲಯದಲ್ಲಿ ಸ್ಥಳಾಭಾವ ಉಂಟಾದಲ್ಲಿ ಅಂತಹ ಸಮಯದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಕಂಡೀಷನ್ ಅಡ್ಮೀಷನ್ ನೀಡಲಾಗುವುದು. ವಿದ್ಯಾರ್ಥಿನಿಲಯಗಳಿಗೆ ಪ್ರವೇಶವನ್ನು ಪಡೆಯುವ ಎಲ್ಲಾ ವಿದ್ಯಾರ್ಥಿಗಳು ಕಂಡೀಷನ್ ಅಡ್ಮೀಷನ್‌ಗೆ ಒಪ್ಪಬೇಕು. **ಈ ಮೇಲಿನ ಎಲ್ಲಾ ನಿಬಂಧನೆ/ ಷರತ್ತುಗಳನ್ನು** ಓದಿ ತಿಳಿದುಕೊಂಡು ಒಪ್ಪಿ ನಿಲಯಕ್ಕೆ ಪ್ರವೇಶವನ್ನು ಪಡೆದಿದ್ದೇನೆ. |

ತಂದೆ/ತಾಯಿ/ಪೋಷಕರ ಸಹಿ

ವಿದ್ಯಾರ್ಥಿ ಸಹಿ/–